ಅ) ಕಳೆದ ಜುಲೈ ತಿಂಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಂದ ಭೀಕರ ಸುಂಟರಗಾಳಿಯಿಂದ ಆದ ಅನಾಹುತಗಳಿಂದ ಮನೆ ಕಳೆದುಕೊಂಡವರ ಸಂಖ್ಯೆ ಎಷ್ಟು?

ಆ) ಎಷ್ಟು ಜನರಿಗೆ ಇದರಿಂದಾಗಿ ತೊಂದರೆಯಾಗಿದೆ (ಅಂಕಿ-ಅಂಶಗಳೊಂದಿಗೆ) ಮತ್ತು ಒಟ್ಟು ನಷ್ಟ ಎಷ್ಟು?

ಇ) ಸರ್ಕಾರ ಈ ಜನರಿಗೆ ಪುನರ್‌ವಸತಿ ಅಥವಾ ವ್ಯವಸ್ಥೆಗೋಸ್ಕರ ಎಷ್ಟು ಜನರಿಗೆ ಎಷ್ಟೆಷ್ಟು ಪರಿಹಾರದ ಮೊತ್ತ ಒದಗಿಸಿದೆ?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) 313 ಮನೆಗಳು ಭಾಗಶಃ ಮತ್ತು 8 ಮನೆಗಳು ಪೂರ್ಣವಾಗಿ, ಹೀಗೆ ಒಟ್ಟು 321 ಮನೆಗಳು ಹಾನಿಗೊಂಡಿದೆ.

ಆ) 331 ಕುಟುಂಬಗಳಿಗೆ ತೊಂದರೆಯಾಗಿದೆ. ಹಾನಿಯ ವಿವರ ಕೆಳಕಂಡಂತಿದೆ

(ರೂ. ಲಕ್ಷಗಳಲ್ಲಿ)

			ಲುಕ್ಸಾನು
1.	ಪೂರ್ಣ ಮನೆ ಹಾನಿ	-8	2.70
2.	ಭಾಗಶಃ ಮನೆ ಹಾನಿ	313	16.65
3.	ಜಾನುವಾರು ಹಟ್ಟಿಹಾನಿ	9	0.37
4.	ನೀರಾವರಿ ಪಂಪ್‌ಸೆಟ್ ಹಾನಿ	1	0.02
	ಒಟ್ಟು	331	19.74

ಇ) ನಿಯಮಾನುಸಾರ ಈವರೆಗೆ 242 ಜನರಿಗೆ ರೂ. 4,64,354.00ಗಳ ಪರಿಹಾರವನ್ನು ನೀಡಲಾಗಿದೆ. ಅಲ್ಲದೇ, ಸುಂಟರಗಾಳಿಯಿಂದ ಹೆಚ್ಚಿನವು ಹೆಂಚು ಹಾರಿ ಹೋಗಿರುವ ಪ್ರಕರಣಗಳಾಗಿದ್ದು, 28,200 ಹೆಂಚುಗಳನ್ನು ಸಂತ್ರಸ್ತರ ಮನೆಗಳಿಗೆ ತಲುಪಿಸಿ, ಸರ್ಕಾರದಿಂದ ಹೆಂಚು ಹೊದಿಸುವ ವ್ಯವಸ್ಥೆಯನ್ನು ಮಾಡಲಾಗಿದೆ.

ಬಸ್ಸಿನ ಬಾಡಿ ಕಟ್ಟುವುದರ ಬಗ್ಗೆ

2323 - ಡಾ|| ಎಂ.ಪಿ. ಕರ್ಕಿ (ಕುಮಟ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರ ಖರೀದಿಸಲು ನಿಶ್ಚಯಿಸಿದ 1500 ಬಸ್ ಛಾಸಿಗಳಲ್ಲಿ ಎಷ್ಟು ಛಾಸಿಗಳನ್ನು ಕಳೆದ 9 ತಿಂಗಳಲ್ಲಿ ಖರೀದಿಸಿದೆ?

ಆ) ಎಷ್ಟು ಛಾಸಿಗಳಿಗೆ ಬಾಡಿ ಕಟ್ಟಿ ಯಾವ ಡಿವಿಶನ್‌ಗಳಿಗೆ ಕಳಿಸಿದೆ, ಇವುಗಳಲ್ಲಿ ಸಾಧಾ ಆರೆಸುಖಾಸೀನ, ಸುಖಾಸೀನ, ಅತ್ಯಂತ ಸುಖಾಸೀನ ಬಸ್ಸುಗಳ ಸಂಖ್ಯೆ ಎಷ್ಟು, (ವಿವರ ಒದಗಿಸುವುದು)

ಇ) ಉತ್ತರ ಕನ್ನಡ ಸಿರ್ಸಿ ಡಿವಿಶನ್‌ನಲ್ಲಿ ಯಾವ ವಿಧದ ಬಸ್ಸುಗಳಿಗೆ ಎಷ್ಟು ಬೇಡಿಕೆಗಳಿವೆ?

ಈ) ಸಿರ್ಸಿ ಡಿವಿಶನ್‌ನಲ್ಲಿ 8 ಲಕ್ಷಕ್ಕೂ ಹೆಚ್ಚು ಕಿ.ಮೀ. ಸಂಚರಿಸಿದ ಬಸ್ಸುಗಳ ವಿವರ ಒದಗಿಸುವುದು?

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಸಚಿವರು) :

ಅ) 1995-96ನೇ ಹಣಕಾಸು ವರ್ಷದಲ್ಲಿ ಏಪ್ರಿಲ್ ತಿಂಗಳಿನಿಂದ ದಿನಾಂಕ 31-8-1995ರವರೆಗೆ ಈ ವರ್ಷದಲ್ಲಿ ಖರೀದಿಸಲು ಉದ್ದೇಶಿಸಲಾಗಿರುವ 1500 ಛಾಸಿಗಳ ಪೈಕಿ 479 ಹೊಸ ಛಾಸಿಗಳನ್ನು ಖರೀದಿಸಲಾಗಿದೆ.

ಆ) ವಿಭಾಗವಾರು ಕೊಡಲಾದ ವಿವಿಧ ರೀತಿಯ ವಾಹನಗಳ ವಿವರವು ಈ ಕೆಳಕಂಡಂತಿದೆ

ಕ್ರ ಸಂ	ವಿಭಾಗ	ಯೋಜನೆ ಪ್ರಕಾರ	ಈ ಸುವಿ	ತನಕ ಆ.ಸು	ವಿತರಿಸಲಾದ ಪುಷ್ಪಕ್	ವಾಹನಗಳ ಸಂಖ್ಯೆ ಗ್ರಾ	ನಸಾ	ಒಟ್ಟು
1)	ಬೆಂ(ಕೇ)	52	8	4	-	23	-	35
2)	ಬೆಂ(ಗ್ರಾ)	52	-	-	-	20	-	20
3)	ಕೋಲಾರ	85	-	-	-	33	-	33
4)	ಮೈಸೂರು	111	2	6	2	43	4	57
5)	ಹಾಸನ	67	-	-	-	26	-	26
6)	ಗುಲ್ಬರ್ಗಾ	81	-	-	-	31	-	31
7)	ರಾಯಚೂರು	50	2	2	-	24	-	28
8)	ಮಂಗಳೂರು	62	1	4	-	22	-	27
9)	ಹುಬ್ಬಳ್ಳಿ	113	2	1	1	44	7	55
10)	ಗದಗ	70	-	-	-	27	-	27
11)	ಉ.ಕ(ಸಿರ್ಸಿ)	72	-	5	-	20	-	25
12)	ದಾವಣಗೆರೆ	43	-	-	-	18	-	18
13)	ಬೆಳಗಾಂ	119	2	4	-	48	2	56
14)	ಬಿಜಾಪುರ	84	-	-	-	32	-	32
15)	ಬಾಗಲಕೋಟೆ	38	2	-	-	22	-	24
16)	ಬಳ್ಳಾರಿ	63	-	-	-	24	-	24
17)	ಬೀದರ್	43	-	2	-	16	-	18
18)	ಬೆನಸಾ	295	-	-	48	-	22	70
	ಒಟ್ಟು	1500	19	28	51	473	35	606

ಇ) ಅವಶ್ಯಕತೆ ಇರುವ ವಿವಿಧ ಮಾದರಿಯ ವಾಹನಗಳ ವಿವರ ಈ ಕೆಳಕಂಡಂತಿದೆ

ಕ್ರ ಸಂ	ಮಾದರಿ ವಾಹನಗಳು	ಒಟ್ಟಾರೆ ಅವಶ್ಯಕತೆ	ವಾಹನಗಳ	ನೀಡಿದ ವಾಹನಗಳು	ಬಾಕಿ
1)	ಸುವಿಹಾರಿ	2	ಹೊಸ ಮಾರ್ಗಕ್ಕಾಗಿ	-	-
		2	ಬದಲಾವಣೆಗಾಗಿ	-	-
	ಒಟ್ಟು	4			4
2)	ಅರೆಸುವಿಹಾರಿ	9		2	7
3)	ಗ್ರಾಮಾಂತರ	52	ಬದಲಾವಣೆ	25	47
		20	ಹೊಸ ಮಾರ್ಗಕ್ಕಾಗಿ		
	ಒಟ್ಟು	72			

ಉಳಿದ ವಾಹನಗಳನ್ನು ಕಾರ್ಯ ಯೋಜನೆಯ ಪ್ರಕಾರ ಮಾರ್ಚ್ 1996ರ ಒಳಗಾಗಿ ಹಂತ ಹಂತವಾಗಿ ನೀಡಲಾಗುವುದು.

ಇ) ಸಿಸಿ ವಿಭಾಗದಲ್ಲಿ 33 ವಾಹನಗಳು 8 ಲಕ್ಷಕ್ಕೂ ಹೆಚ್ಚು ಕ್ರಮಿಸಿರುವ ವಾಹನಗಳು ಇವೆ. ಘಟಕವಾರು ಇರುವ ವಾಹನಗಳ ವಿವರ ಈ ಕೆಳಕಂಡಂತಿದೆ.

ಘಟಕ	ವಾಹನಗಳು
ಸಿಸಿ	11
ಕುಮ್ಟ	04
ಕಾರವಾರ	12
ಹಳಿಯಾಳ	02
ಭಟ್ಕಳ	04
ಒಟ್ಟು	33

ಗ್ರಾಮ ಸಹಾಯಕ ಹುದ್ದೆ ಖಾಯಂ

2244 - ಶ್ರೀ ಹೆಚ್.ಕೆ. ಕುಮಾರಸ್ವಾಮಿ (ಬೇಲೂರು) : ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಾದ್ಯಂತ ಗೌರವ ಧನ ಪಡೆದು ಕೆಲಸ ಮಾಡುತ್ತಿರುವ ಗ್ರಾಮ ಸಹಾಯಕರ ನೇಮಕಾತಿಯನ್ನು ಸರ್ಕಾರ ಖಾಯಂ ಮಾಡುವುದೇ?

ಆ) ಖಾಯಂ ಮಾಡಲು ಆಗಿರುವ ವಿಳಂಬಕ್ಕೆ ಕಾರಣಗಳೇನು?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಮಂತ್ರಿಗಳು) :

ಅ) ಇಲ್ಲ